**CC. No.580/2016**
**DW -1**

**ಪ್ರಮಾಣೀಕರಿಸಲಾದ ದಿನಾಂಕ: 10-11-2025.**

**ಪಾಟೀ ಸವಾಲು : ಆರೋಪಿ ಪರ ಶ್ರೀ. ವಕೀಲರಿಂದ :-**

ನನ್ನ ಸ್ವಂತ ಊರು ಭೈರಾಪುರ , ಕಸಾಬಾ ಹೋಬಳಿ. ನಾನು ದ್ವಿತೀಯ ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿದೆದೇನೆ. ನನ್ನ ವಿದ್ಯಾಭ್ಯಾಸಕ್ಕೆ ನನ್ನ ಊರಿನಿಂದಲೇ ಓಡಾಡುತ್ತಿದೆ. ಆನಂತರ ನಾನು ಆನಂದ ಮೆಡಿಕಲ್ ತಿಪಟೂರು ನಲ್ಲಿ ಸುಮಾರು 9 ವರ್ಷಗಳಿಂದ ಕೆಲಸ ಮಾಡಡುತ್ತಿದ್ದ. ನಾನು ಯವ ದಿನಾಂಕದಿಂದ ಸದರಿ ಕೆಲಸ ಮಾಡುತ್ತಿದ್ದೆ ಎಂದು ನೆನಪಿಲ್ಲ. ಆನಂತ ರ ನಾನು ಸ್ವಂತ ಮೆಡಿಕಲ್ ಅಂಗಡಿಯನ್ನು ತಿಪಟೂರು ರೈಲ್ವೆ ಸ್ಟೇಷನ್ ಬಳಿ ಹಾಕಿಕೊಂಡಿದ್ದೆ ಎಂದರೆ ಸರಿ . ನಾನು ನ್ನ ಮೆಡಿಕಲ್ ಅಂಗಡಿಯನ್ನು ತೆರೆದು 25 ವರ್ಷಗಳಾಗಿವೆ. ನಿರ್ದಿಷ್ಟ ದಿನಾಂಕ ನೆನಪಿಲ್ಲ.

ನಾನು ಸುಮಾರು 10 ವರ್ಷಗಳಿಂದ ಚೀಟಿ ವ್ಯವಹಾರ ಮಾಡುತ್ತಿದೆದೇನೆ ಎಂದರೆ ಸರಿಯಿಲ್ಲ. ನಾನು ಗ್ರೀನ್ ಬರ್ಡ್ಸ್ ನಲ್ಲ ವವಹಾರ ಮಾಡುತ್ತಿದೆದ ಎಂದರೆ ಸರಿಯಲ್ಲ , ನಾನು ಪಿಗ್ಮಿ ಮುಖಾಂತರ ಹಣ ಕಟ್ಟುತ್ತಿದ್ದೆ ಎಂದರೆ ಸರಿ . ನಾನು ಗ್ರೀನ್ ಬರ್ಡ್ಸ್ ನಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ . ನಾನು ಬೇರೆ ಸಾರ್ವಜನಿಕರಿಂದ ಗ್ರೀನ್ ಬರ್ಡ್ಸ್ ಕಂಪನಿಗೆ ಇನ್ ವೆಸ್ಟ ಮಾಡುವಂತೆ ಹಣ ಕಟ್ಟುಸುತ್ತಿದ್ದೆ ಎಂದರೆ ಸರಿಯಲ್ಲ, ಗ್ರೀನ್ ಬರ್ಡ್ ಕಂಪನಿ ಷೇರು ಮಾರುಕಟ್ಟೆಯಲ್ಲಿ ಮುಳುಗಿ ಹೋಗಿದೆ ಎಂದರೆ ಸರಿ .

ನಮ್ಮದು ಮೂಲತಃ ಕೃಷಿ ಕುಟುಂಬ ಎಂದರೆ ಸರಿ . ನನ್ನ ತಂದೆ ತಾಯಿಗೇ ನಾನೊಬ್ಬನೇ ಮಗ. ನಮ್ಮ ಊರಿನಲ್ಲ್ ಸ್ವಲ್ಪ ಖುಷಿ ಜಮೀನು ಇದೆ ಎಂದರೆ ಸರಿ . ಸಾಕ್ಷಿ ಮುಂದುವರೆದು ನನ್ನ ಬಳಿ ತೆಂಗಿನ ತೋಟ ಇದೆ ಎಂದು ನುಡಿಯುತ್ತಾರೆ. ನನಗೆ ಜಮೀನಿನಿಂದ ಆದಾಯ ಇದೆ.

ತಿಪಟೂರಿನಲ್ಲಿ 10-15 ವರ್ಷಗಳಿಂದ ನುಸಿ ಪೀಡೆ ರೋಗ, ಅಂತರ್ ಜಲದ ಸಮಸ್ಯೆ ಇತು ಎಂದರೆ ಸರಿಯಲ್ಲ. ಆದ್ದರಿಂದ ಆ ಕಾಲಕ್ಕೆ ಯಾರಿಗೂ ಕೃಷಿ ಆದಾಯ ಇರಲಿಲ್ಲ ಎಂದರೆ ಸಾಕ್ಷಿಯು ನಾನು ಸಂಪೂರ್ಣ ಕೃಷಿಯಿಂದ ಬಂದಿದದ್ದ ಆದಾಯ ದ ಮೇಲೆ ಅವಲಂಬಿತನಾಗಿರಲಿಲ್ಲ ನನಗೆ ಮೆಡಿಕಲ್ ಅಂಗಡಿ ವ್ಯವಹಾರದಿಂದ ಆದಾಯದಿಂದ ಬರುತ್ತಿತ್ತು. ನನ್ನ ಹೆಸರಿನಲ್ಲಿ ಮಡಿಕಲ್ ಲೈಸೆನ್ಸ ಇರಲಿಲ್ಲ, ನಾನು ಸರ್ಟಿಫೀಕೇಟ್ ಹೋಲ್ಡರ್ ನ್ನು ಅಂಗಡಿಯಿಂದ ತೆಗೆದುಕೊಂಡಿದ್ದೆ. ನಾನು ಸ್ನೇಹ ಎಂಬುವರ ಹೆಸರಿಲಿಲ ಸರ್ಟಿಫೀಕೇಟನ್ನು ಪಡೆದುಕೊಂಡಿದ್ದೆ. ನಾನು ಇಂದಿಗೂ ಸಹ ಸ್ನೇಹ ಎಂಬುವರ ಅಂಗಡಿಯಿಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೇ ಸಾಕ್ಷಿ ಅವರು ಅಂಗಡಿಯ ಮಾಲೀಕರಲ್ಲ ಕೇವಲ ಸರ್ಟಿಫೀಕೇಟಿ ಹೋಲ್ಡರ್ ಮಾತ್ರ . ಫಾರ್ಮಸಿ ಲೈಸೆನ್ಸನ್ನು ಮಾರಾಟ ಮಾಡಲು ಕಾನೂನು ರೀತಿಯಲ್ಲ ಅವಕಾಶ ಇಲ್ಲ ಎಂದರೆ ಸರಿಯಲ್ಲ. ಸದರಿ ಲೈಸೆನ್ಸ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನ್ನದು ಯಾವುದೇ ತಕರಾರು ಇಲ್ಲ.

2014-15 ನೇ ಸಾಲಿನಲ್ಲಿ ಷೇರು ಮಾರುಕಟ್ಟೆಯಲ್ಲಿ ನಾನು ಹಾಕಿದ ದುಡ್ಡು ಕಳೆದುಹೋದ ಕಾರಣ ನನಗೆ ಆರ್ಥಿಕ ಸಮಸ್ಯೆ ಉಂಟಾಗಿದೆ ಎಂದರೆ ಸರಿಯಲ್ಲ.

**CC. No.580/2016**
**DW -1**

ಪಿರ್ಯಾದಿ ನನ್ನ ಪರಿಚಯಸ್ಥ. ಪಿರ್ಯಾದಿನನ್ನ ಅಂಗಡಿ ಗಲ್ಲಾ ಪೆಟ್ಟಿಗೆಯಲಿ ಕುಳಿತುಕೊಳುವಷ್ಟು ವಿಶ್ವಾಸ ನಮ್ಮ ಬಳಿ ಇತ್ತು. ನನಗೆ ಆರ್ಥಿಕ ಸಮಸ್ಯ ಇದ್ದ ಕಾರಣ ನಾನು ಪಿರ್ಯಾದಿಯಿಂದ ಹಣ ಪಡೆದಿರುತ್ತೇನೆ ಎಂದರೆ ಸರಿಯಲ್ಲ.

ನನಗೆ ಇಬ್ಬರು ಗಂಡು ಮಕ್ಕಳು . ಒಬ್ಬ ಡಿಪ್ಲೋಮಾ ಮಾಡಿದ್ದು, ಇನ್ನೊಬ್ಬ ಪದವಿಯನ್ನು ಹೊಂದಿದ್ದಾನೆ. ನನ್ನ ಬಳಿ ಸ್ವಂತ ಮನೆ ಇಲ್ಲ. ನನಗೆ ಮದುಗೆ ದಿನಾಂಕ ಮರೆತದೆ. ನನಗೆ ಮದುವೆಯಾಗಿ ಸುಮಾರು 29 ವರ್ಷ ಆಗಿದೆ. ಮದುವೆಯಾದ ನಂತರ ನಾನು ತಿಪಟೂರಿನಲ್ಲಿ ವಾಸ ವಿದ್ದೆ . ನ್ನ ಮಕ್ಕಳ ವಿದ್ಯಬ್ಯಾಸ ಮತ್ತು ಕುಟುಂಬದ ನಿರ್ವಹಣೆಗಾಗಿ ನಾನು ಪಿರಾದಿಯಿಂದ ಸಾಲ ಪಡೆದಿದ್ದೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿಯಿಂದ ಸಾಲ ಪಡೆದಿದ್ದು ಅವರು ಸಾಲ ಮರುಪಾವತಿಗಾಗಿ ಬಹಳಷ್ಟು ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 19-12-2015 ರಂದು ನಾನು ಖುದ್ದಾಗಿ ಪಿರ್ಯಾದಿಯ ಮನೆಗೆ ಹೋಗಿ ರೂ. 4,75,000/- ಹಣವನ್ನು ಸಾಲವಾಗಿ ಪಿರ್ಯಾದಿಯಿಂದ ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ಸದರಿ ಸಾಲದ ಮರುಪಾವತಿಗಾಗಿ ದಿನಾಂಕ 16-01-2016 ರಂದು ನಾನು ಪಿರಾದಿ ನಿಪಿ.1 ಚೆಕ್ಕನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಚೆಕನ್ನು ನಗದೀಕರಣಕ್ಕಾಗಿ ಪಿರಾದಿ ಬ್ಯಾಂಕ್ ಗೆ ಹಾಕಿದ್ದರು ಎಂದರೆ ಸರಿ . ಈ ಚೆಕ್ ನ್ನು ಬ್ಯಾಂಕಿಗೆ ನಗದೀಕರಣಕ್ಕೆ ಹಾಕುವ ಪೂರ್ವದಲ್ಲಿ ಸಾಲವನ್ನು ಮರುಪಾವತಿ ಮಾಡುವಂತೆ ಪಿರ್ಯಾದಿ ನನ್ನ ಬಳಿ ಕೇಳಿಕೊಂಡಿದ್ದರು ಎಂದರೆ ಸರಿಯಲ್ಲ. ನಿಪಿ.1 ಚೆಕ್ ನ್ನು ನಾನು ಕೊಟ್ಟಿದ್ದರೂ ಸಹ ನಮ್ಮ ಜೊತೆ ವಿಶ್ವಾಸದಿಂದ ಅವರು ನನ್ನ ಬಳಿ ಸಾಲ ಮರುಪಾವತಿ ಮಾಡುವಂತೆ ಕೇಳಿಕೊಂಡಿದ್ದರು ಎಂದರೆ ಸರಿಯಲ್ಲ. ನನಗೆ ಬ್ಯಾಂಕ್ ವ್ಯವಹಾರ ಮಾಡುವ ಜ್ಞಾನ ಇತ್ತು .

ನನಗೆ 4-5 ಬ್ಯಾಂಕ್ ಗಳಲ್ಲಿ ಖಾತೆ ಇದೆ. ನ್ನ ಬಳಿ ಕರ್ನಾಟಕ ಬಾಂಕ್ ಐಎನ್ ಜಿ ವೈಶ್ಯಾ ಬ್ಯಾಂಕ್ ಎಸ್ ಬಿ ಎಂ ಬ್ಯಾಂಕ್ ಮತ್ತು ಫೆಡರಲ್ ಬ್ಯಾಂಕ್ ನಲ್ಲಿ ಖಾತೆ ಇದೆ. ನನ್ನ ಮೆಡಿಕಲ್ ಶಾಪ್ ವ್ಯವಹಾರದ ಲೆಕ್ಕ ಪಟ್ಟಿಯನ್ನು ಇಟ್ಟಿದ್ದೇನೆ. ನಾನು ಇನಕಂ ಟ್ಯಾಕ್ಸ ಕಟ್ಟುವಾಗ ಎಲ್ಲಾ ಬ್ಯಾಂಕ್ವ ವ್ಯವಹಾರದ ಬಗ್ಗೆ ನಾನು ಮಾಹಿತಿ ನೀಡಿದ್ದೇನೆ. ನಾನು ಇನಕಂ ಟ್ಯಾಕ್ಸ ರಿರ್ಟನ್ಸ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತಕರಾರು ಇಲ್ಲ. ನಾನು ಸುಮಾರು 5 ವರ್ಷಗಳ ಕಾಲ ಐ ಎನ್ ಜಿ ವೈಶ್ಯಾ ಬ್ಯಾಂಕ್ ನಲ್ಲಿ ವ್ಯವಹಾರ ಮಾಡುತ್ತಿದ್ದೇನೆ.

ಪಿರಾದಿನನ್ನ ಬಳಿ ಬಂದು ಸಾಲದ ಮರುಪಾವತಿಗಾಗಿ ಕೇಳಿಕೊಂಡಾಗ ಹಾಗೂ ನಾನು ನೀಡಿದ ಚೆಕ್ನ ನ್ನು ನಗದೀಕರಣಾಕ್ಕಾಗಿ ಬ್ಯಂಕ್ ಗೆ ಸಲಿಸುತ್ತಾನೆ ಎಂದು ತಿಳಿಸಿದ ನಂತರ ನಾನು ನನ್ನ ಖಾತೆಯನ್ನು ಮಚ್ಚರುತ್ತೇನೆಎಂದರೆ ಸರಿಯಲ್ಲ. ನನಗೆ ಬ್ಯಾಂಕ್ ವ್ಯವಹಾರ , ಷೇರು ಮಾರುಕಟ್ಟೆ ವ್ಯವಹಾರ ಮತ್ತು ಮಡಿಕಲ್ ವ್ಯವಹಾರ ಗೊತ್ತಿರುತ್ತದೆಎಂದರೆ ಸರಿ . ನನಗೆ ಎಲ್ಲಾ ವ್ಯವಹಾರದ ಮಾಹಿತಿ ಇದ್ದು ಪಿರ್ಯಾದಿಗೆ ಮೋಸ ಮಾಡುವ ಉದ್ದೇಶದಿಂದ ನನ್ನ ಬ್ಯಾಂಕ್ ಖಾತೆಯನ್ನು ಮುಚ್ಚಿ ರುತ್ತೇನೆ ಎಂದರೆ ಸರಿಯಲ್ಲ.

ನನಗೆ ಪಿರ್ಯಾದಿಯಿಂದ ನೋಟೀಸು ಬಂದಿರುತ್ತದೆ ಎಂದರೆ ಸರಿ . ನಾನು ಸದರಿ ನೋಟೀಸಿಗೆ ಉತ್ತರ ಕೊಟ್ಟಿದೆದೇನೆ, ಸದರಿ ಉತ್ತರದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನನಗೆ ಸದರಿ ನೋಟೀಸು ಜಾರಿಯಾದ ದಿನಾಂಕ ನೆನಪಿಲ್ಲ. ಉತ್ತರದ

**CC. No.580/2016**
**DW -1**

ನೋಟೀಸಿನ ದಿನಾಂಕ ನೆನಪಿಲ್ಲ. ವಕೀಲರ ಹೆಸರು ನಾಗಭೂಷಣ್ . ಸದರಿ ಪ್ರತಿಯನ್ನು ಯಾವ ದಿನ ಹಾಜರುಪಡಿಸಿದ್ದೆ ಎಂದು ನನಗೆ ನೆನಪಿಲ್ಲ. ನನ್ನ ವಿರುದ್ದ ಹಲವಾರು ಪ್ರಕರಣಗಳು ದಾಖಲಾಗಿವೆ ಎಂದರೆ ಸರಿಯಲ್ಲ. ನಾಗಭೂಷಣ್ ವಕೀಲರು ನನಗೆ ಬಹಣ ಪರಿಚಯಸ್ದರೆಂದು ಹಾಗೂ ನನ್ನ ಎಲ್ಲಾ ವ್ಯವಹಾರದ ಬಗ್ಗೆಮಾಹಿತಿ ಇದೆಎಂದರೆ ಸರಿಯಲ್ಲ. ಪಿರಾದಿನನಗೆ ನೀಡಿದ ನೋಟಸೀನ ಪ್ರತಿ ನಾನು ವಕೀಲರಿಗೆ ಕೊಟ್ಟಿದ್ದೇನೆ. ನನಗೆ ಇಂಗ್ಲಿಷ ಓದಲು ಬರೆಯಲು ಬರುವುದಿಲ್ಲ. ಸದರಿ ಪಿರಾದಿ ನೀಡಿದ ನೋಟೀಸನ್ನು ನಾನು ಓದಿ ತಿಳಿದುಕೊಂಡಿಲ್ಲ. ವಕೀಲರು ಸದರಿ ನೋಟೀಸಿನ ವಿಚಾರವನ್ನು ನನಗೆ ತಿಳಿಸಿರುತ್ತಾರೆ. ಉತ್ತರದ ನೋಟೀಸಿಗೆ ನನ್ನ ವಕೀಲರು ನೀಡಿರುತ್ತಾರೆ. ಉತ್ತರದ ನೋಟೀಸು ಇಂಗ್ಲೀಷ್ ಮತ್ತು ಕನ್ನಡದಲ್ಲಿತ್ತು.

ಸದರಿ ಉತ್ತರದ ನೋಟೀಸಿನಲ್ಲಿ ಇರುವಂತ ಮಾಹಿತಿ ನನಗೆ ಇದೆ ನಾಗಭೂಷಣ್ ವಕೀಲರು ನನಗೆ ಹೇಳಿರುತ್ತಾರೆ.

**ಮುಂದುವರೆದ ಪಾಟೀಸವಾಲಿಗೆ ವಕೀಲರು ಕಾಲಾವಕಾಶ ಕೋರಿರುತ್ತಾರೆ ನೀಸಲಾಯ್ತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಪ್ರಧಾನ ಸಿವಿಲ್ ನ್ಯಾಯಾಧೀಶರು, ತಿಪಟೂರು**